# ಪರ್ಯಾಯ ಶೈಕ್ಷಣಿಕ ಯೋಜನೆ : 2021–22

**ತರಗತಿ : 9** **ತಿಂಗಳು : ಮಾರ್ಚ್** **ವಿಷಯ : ದ್ವಿತೀಯ ಭಾಷೆ – ಕನ್ನಡ**

| ಕ್ರ.ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಮಾರ್ಚ್** ಮೊದಲನೆಯ ವಾರ. | **ಗದ್ಯ – ಭೀಷ್ಮ ಪ್ರತಿಜ್ಞೆ**<br>• ಮಕ್ಕಳಲ್ಲಿ ಆಲಿಸುವ ಮತ್ತು ಮಾತನಾಡುವ ಸಾಮರ್ಥ್ಯವನ್ನು ಬೆಳೆಸುವುದು.<br>• ನೀಡಿದ ಪದಗಳನ್ನು ಬಳಸಿಕೊಂಡು ಅರ್ಥಪೂರ್ಣವಾದ ವಾಕ್ಯಗಳ ಮೂಲಕ ಕವಿ ಪರಿಚಯ ಮಾಡಿಕೊಡುವರು. | • ಮಹಾಭಾರತದಲ್ಲಿ ಬರುವ ಪ್ರಮುಖ ಪಾತ್ರಗಳನ್ನು ಕುರಿತು ಶಿಕ್ಷಕರು ವಿವರಿಸುವರು ಮತ್ತು ಪೂರ್ವ ಕಥೆಯನ್ನು ಅಧ್ಯಾಕರು ಹೇಳಿ ಮಕ್ಕಳಿಂದ ಹೇಳಿಸುವರು.<br>• ಕೃತಿಕಾರರಾದ ಎ ಆರ್ ಕೃಷ್ಣಶಾಸ್ತ್ರಿ ಅವರ ಸ್ಥಳ, ಕಾಲ ಮತ್ತು ಕೃತಿಗಳಿಗೆ ಸಂಬಂಧಿಸಿದ ಪದಗಳನ್ನು ನೀಡಿ, ಅವುಗಳ ಸಹಾಯದಿಂದ ವಾಕ್ಯರೂಪದಲ್ಲಿ ಲೇಖಕರ ಪರಿಚಯವನ್ನು ಬರೆಸುವುದು.<br>• ಮೌಖಿಕ ರೂಪದಲ್ಲಿಯೂ ಮಕ್ಕಳಿಂದ ಹೇಳಿಸುವುದು.<br>**ಅಭ್ಯಾಸ ಹಾಳೆ 1** | • ಮಹಾಭಾರತದಲ್ಲಿ ಬರುವ ಮುಖ್ಯ ಪಾತ್ರಗಳನ್ನು ಪಟ್ಟಿ ಮಾಡಿ.<br>• ಕೃತಿಕಾರರಾದ ಎ.ಆರ್.ಕೃಷ್ಣಶಾಸ್ತ್ರಿ ಅವರನ್ನು ವಾಕ್ಯರೂಪದಲ್ಲಿ ಪರಿಚಯಿಸಿ. |
| | | • ಶಿಕ್ಷಕರು ಗದ್ಯಭಾಗವನ್ನು ಸೂಕ್ತ ಸ್ವರಭಾರಗಳೊಂದಿಗೆ ಲೇಖನ ಚಿಹ್ನೆಗಳನ್ನು ಅನುಸರಿಸಿ ಓದುವರು. ವಿದ್ಯಾರ್ಥಿಗಳು ಗದ್ಯವನ್ನು ಓದುವರು ಮತ್ತು ಓದಿದ ಗದ್ಯವನ್ನು ಅರ್ಥೈಸಿಕೊಂಡು ತಮ್ಮ ಮಾತುಗಳಲ್ಲಿ ವಿವರಿಸುವರು | • ವಿದ್ಯಾರ್ಥಿಗಳು ಶಿಕ್ಷಕರ ವಾಚನ ಶೈಲಿಯನ್ನು ಅನುಸರಿಸಿ ಗದ್ಯವನ್ನು ವಾಚಿಸುವರು. ಶಿಕ್ಷಕರು ಕೇಳುವ ಪ್ರಶ್ನೆಗಳಿಗೆ ವಾಕ್ಯರೂಪದಲ್ಲಿ ಉತ್ತರಗಳನ್ನು ನೀಡುವರು.<br>(ಪ್ರಶ್ನೋತ್ತರ ಚಟುವಟಿಕೆ ನಡೆಸುವುದು) | |

| | | | | |
|---|---|---|---|---|
| | | • ಶಂತನು ಮತ್ತು ದೇವವ್ರತನ ಗುಣ ಸ್ವಭಾವಗಳನ್ನು ಪರಿಚಯ ಮಾಡಿಕೊಳ್ಳುವರು. | • ಶಂತನು ಮಹಾರಾಜ ಮತ್ತು ಅವನ ಮಗನಾದ ದೇವವ್ರತನ ವ್ಯಕ್ತಿತ್ವದ ವಿಶೇಷತೆಗಳನ್ನು ಅರ್ಥಮಾಡಿಸುವುದು. | |
| | | • ಸಂಭಾಷಣೆ ಹೇಳುವ ಕೌಶಲವನ್ನು ಕಲಿಯುವರು. | • ಶಂತನು ಮತ್ತು ಬೆಸ್ತರ ಹುಡುಗಿಯ ಜೊತೆ ನಡೆದ ಸಂಭಾಷಣೆಯನ್ನು ಹೇಳಿಸುವ ಚಟುವಟಿಕೆ ಮಾಡಿಸುವುದು. | |
| | **ಮಾರ್ಚ್** ಎರಡನೆಯ ವಾರ | • ಭೀಷ್ಮನ ತ್ಯಾಗ, ಪ್ರತಿಜ್ಞೆ, ಬದ್ಧತೆ ಹಾಗೂ ಉದಾತ್ತ ಗುಣಗಳನ್ನು ಅರ್ಥ ಮಾಡಿಕೊಳ್ಳುವರು. | ಶಂತನು ಮಹಾರಾಜನ ಚಿಂತೆಗೆ ಕಾರಣ ದಾಶರಾಜನು ದೇವವ್ರತನನ್ನು ಉದ್ದೇಶಿಸಿ, ಆಡಿದ ಮಾತುಗಳು ಇದಕ್ಕೆ ಪ್ರತಿಯಾಗಿ ದೇವವ್ರತನು ದಾಶರಾಜನ ಮುಂದೆ ಮಾಡಿದ ಪ್ರತಿಜ್ಞೆಗಳನ್ನು ಅರ್ಥೈಸುವ ಚಟುವಟಿಕೆ ಮಾಡಿಸುವುದು. (ಸಂಭಾಷಣೆ ಮೂಲಕ)<br>**ಮೌಲ್ಯಮಾಪನ ಹಾಳೆ–01** | ಶಂತನು ಮಹಾರಾಜನ ಚಿಂತೆಯನ್ನು ಭೀಷ್ಮನು ಹೇಗೆ ಪರಿಹರಿಸಿದನು? |
| | | • ಭಾಷಾಭ್ಯಾಸ ಚಟುವಟಿಕೆಗಳನ್ನು ಅರ್ಥೈಸಿಕೊಳ್ಳುವರು. | • ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸುವ ಚಟುವಟಿಕೆ ಮಾಡಿಸುವುದು.<br>• ಮಾದರಿಯಂತೆ ಪದಗಳನ್ನು ಕೂಡಿಸಿ ಬರೆಸುವುದು.<br>• ಸಮಾನಾರ್ಥಕ ಪದಗಳನ್ನು ಬರೆಸುವುದು. | |

| | | | | |
|---|---|---|---|---|
| | | • ಸೈದ್ಧಾಂತಿಕ ವ್ಯಾಕರಣಾಂಶಗಳನ್ನು ಅರ್ಥ ಮಾಡಿಕೊಳ್ಳುವರು. | • ನುಡಿಗಟ್ಟು–ಪಡೆನುಡಿ<br>ನುಡಿಗಟ್ಟು ಅಥವಾ ಪಡೆನುಡಿಯ ಅರ್ಥವನ್ನು ವಿವರಿಸುವುದು.<br>ನುಡಿಗಟ್ಟುಗಳ ಉದಾಹರಣೆ ನೀಡಿ ವಿಶೇಷಾರ್ಥ ಗುರುತಿಸಿ ಬರೆಯುವ ಚಟುವಟಿಕೆ ಮಾಡಿಸುವುದು.<br>**(ಅಭ್ಯಾಸ ಹಾಳೆ–02)** | |
| | **ಮಾರ್ಚ್** ಮೂರು ಮತ್ತು ನಾಲ್ಕನೆಯ ವಾರ | ಪುನರಾವರ್ತನೆ ಚಟುವಟಿಕೆಗಳು. | | |

## ಅಭ್ಯಾಸ ಹಾಳೆ 1

## ಗದ್ಯ : ಭೀಷ್ಮ ಪ್ರತಿಜ್ಞೆ

ಕೃತಿಕಾರರಿಗೆ ಸಂಬಂಧಿಸಿದ ಮಾಹಿತಿಗಳನ್ನು ಆಧಾರವಾಗಿಟ್ಟುಕೊಂಡು ವಾಕ್ಯರೂಪದಲ್ಲಿ ಲೇಖಕರನ್ನು ಪರಿಚಯ ಮಾಡಿ.

| |
|---|
| ಕೃತಿಕಾರರ ಹೆಸರು : ಅಂಬಳೆ ರಾಮಕೃಷ್ಣಶಾಸ್ತ್ರಿ ಕೃಷ್ಣಶಾಸ್ತ್ರೀ<br>ಕಾಲ: ಫೆಬ್ರವರಿ 12, 1890<br>ಸ್ಥಳ : ಚಿಕ್ಕಮಗಳೂರು ಜಿಲ್ಲೆಯ ಅಂಬಳೆ ಗ್ರಾಮ<br>ತಂದೆ ತಾಯಿ : ರಾಮಕೃಷ್ಣಶಾಸ್ತ್ರಿ, ಶಂಕರಮ್ಮ<br>ಕೃತಿಗಳು : ಶ್ರೀಪತಿಯ ಕಥೆಗಳು, ಕಥಾಮೃತ, ವಚನಭಾರತ, ನಿರ್ಮಲಭಾರತಿ, ಹರಿಶ್ಚಂದ್ರ ಕಾವ್ಯ, ಭಾಸಕವಿ, ಸಂಸ್ಕೃತನಾಟಕ, ಸರ್ವಜ್ಞ, ಬಂಕಿಮಚಂದ್ರ<br>ಪ್ರಶಸ್ತಿ : ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ<br>ನಿಧನ :ಫೆಬ್ರವರಿ 01,1968 |
| |

## ಅಭ್ಯಾಸ ಹಾಳೆ 2

## ಗದ್ಯ : ಭೀಷ್ಮ ಪ್ರತಿಜ್ಞೆ

- **ಮಾದರಿಯಂತೆ ನೀಡಿರುವ ಪದಗಳನ್ನು ಬಿಡಿಸಿ ಸಂಧಿ ಹೆಸರು ತಿಳಿಸಿ**

**ಮಾದರಿ : ಮಗುವನ್ನು = ಮಗು + ಅನ್ನು (ಲೋಪ ಸಂಧಿ)**

ರಾಜ್ಯವಾಳು = ____________ + ______________ ( )

ಗೀತೋಪದೇಶ = ____________ + ______________ ( )

ದೇವಾಲಯ = ____________ + ______________ ( )

ಆಸೆಯಾಗು = ____________ + ______________ ( )

ಶಸ್ತ್ರಾಸ್ತ್ರ = ____________ + ______________ ( )

ಧರ್ಮಾರ್ಥ = ____________ + ______________ ( )

ಮಹರ್ಷಿ = ____________ + ______________ ( )

- **ಮಾದರಿಯಂತೆ ಕೂಡಿಸಿ ಬರೆಯಿರಿ**

**ಮಾದರಿ : ಬೇಟೆ + ಆಡು = ಬೇಟೆಯಾಡು**

ಮಂಗಳ + ಆಗಲಿ = ________________

ಬೆರಗು + ಆಗಿ = ________________

ಮತ್ತೆ + ಆರು = ________________

ಕಾಲ + ಅನಂತರ = ________________

ತಂದೆ + ಅನ್ನು = ________________

ನಷ್ಟ + ಆಗು = ________________

ರೂಪ + ಅಂತರ = ________________

ಕ್ಷೇಮ + ಆಗು = ________________

- **ಕೆಳಗೆ ನೀಡಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ**

**ಮಾದರಿ : ಕಾಡು – ವನ, ಅರಣ್ಯ, ಕಾನನ, ಅಡವಿ**

| | |
|---|---|
| ತಂದೆ – | ಸದೃಶ – |
| ಮಗ– | ಹಗೆ – |
| ಸಾವು – | ಕೋರಿಕೆ – |
| ಸತ್ಯ – | ಅನುರೂಪ – |

- **ಮಾದರಿಯಲ್ಲಿ ನೀಡಿರುವಂತೆ, ಕೊಟ್ಟಿರುವ ನುಡಿಗಟ್ಟುಗಳಿಗೆ ಅರ್ಥ ವಿಶೇಷಗಳನ್ನು ಬರೆಯಿರಿ**

| **ಮಾದರಿ : ನುಡಿಗಟ್ಟು** | **ಅರ್ಥ ವಿಶೇಷ** |
|---|---|
| ಕತ್ತಿಮಸೆ | ದ್ವೇಷ ಸಾಧಿಸು |
| ಅಜಗಜಾಂತರ | ________________ |
| ಚಕಾರವೆತ್ತು | ________________ |
| ಭೂಮಿಗೆ ಭಾರ | ________________ |
| ಕಂಬಿಕೀಳು | ________________ |
| ಸಿಂಹಪಾಲು | ________________ |
| ಕಾಲಿಗೆ ಬುದ್ಧಿ ಹೇಳು | ________________ |
| ಹಿತ್ತಾಳೆ ಕಿವಿ | ________________ |
| ಕೈ ಹಾಕು | ________________ |
| ಕಾಡು ಪಾಲಾಗು | ________________ |
| ಕಣ್ಣುರಿ | ________________ |
| ಹೊಟ್ಟೆಗೆ ಹಾಕಿಕೊ | ________________ |

## ಮೌಲ್ಯಮಾಪನ ಹಾಳೆ –01

**ಅ. ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಗಳಿಂದ ಸೂಕ್ತವಾದುದನ್ನು ಆಯ್ದು ಬರೆಯಿರಿ**

1. ಶಂತನು ಸತ್ಯವತಿಯನ್ನು ____________ ನದಿ ತೀರದಲ್ಲಿ ಭೇಟಿಯಾದನು.

ಅ) ಗಂಗಾ    ಬ) ಯಮುನಾ    ಕ) ಕಾವೇರಿ    ಡ) ಬ್ರಹ್ಮಪುತ್ರ

2. ದೇವವ್ರತನು ಪ್ರತಿಜ್ಞೆ ಮಾಡಿದ್ದು ____________ ಅವರ ಆಸೆ ತಣಿಸಲು

ಅ) ಸತ್ಯವತಿ    ಬ) ದಾಶರಾಜ    ಕ) ಶಂತನು    ಡ) ದೇವರು

3.ಎ. ಆರ್.ಕೃಷ್ಣಶಾಸ್ತ್ರೀ ಅವರ ____________ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ

ಅ) ಬಂಕಿಮಚಂದ್ರ    ಬ) ವಚನಭಾರತ    ಕ) ಶ್ರೀಪತಿಯ ಕಥೆಗಳು    ಡ) ಕಥಾಮೃತ

**ಆ) ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1. ಶಂತನು ಯಾವ ವಂಶದ ಪ್ರಸಿದ್ಧ ರಾಜನಾಗಿದ್ದನು?
2. ಶಂತನು ಮಹಾರಾಜನು ಯಾವ ರಾಜ್ಯದ ರಾಜನಾಗಿದ್ದನು?
3. ಭೀಷ್ಮನ ಪೂರ್ವದ ಹೆಸರೇನು?
4. ಶಂತನು ಯಾವುದಕ್ಕೆ ಹೆಸರುವಾಸಿಯಾಗಿದ್ದನು?
5. ದೇವವ್ರತನು ತನ್ನ ತಂದೆಯವರ ಚಿಂತೆಗೆ ಕಾರಣವನ್ನು ಯಾರಿಂದ ತಿಳಿದನು?
6. ಶಂತನು ಮದುವೆ ಆಗಲು ಬಯಸಿದ ಬೆಸ್ತರ ಮಗಳ ಹೆಸರೇನು?
7. ದಾಶರಾಜನು ಶಂತನುವಿನ ಬಳಿ ಏನೆಂದು ಕೋರಿಕೊಂಡನು?
8. ಶಂತನು ಮಹಾರಾಜನು ಭೀಷ್ಮನನ್ನು ಏನೆಂದು ಹರಸಿದನು?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ಶಂತನು ದೇವವ್ರತನನ್ನು ಹಸ್ತಿನಾಪುರದ ಯುವರಾಜನಾಗಿ ಏಕೆ ಮಾಡಿದನು?
2. ಶಂತನು ದೇವವ್ರತನಿಗೆ ತನ್ನ ಚಿಂತೆಗೆ ಕಾರಣ ಏನೆಂದು ತಿಳಿಸಿದನು?
3. ದೇವವ್ರತನು ದಾಶರಾಜನ ಮುಂದೆ ಮಾಡಿದ ಪ್ರತಿಜ್ಞೆಗಳಾವುವು?
4. ದಾಶರಾಜನು ದೇವವ್ರತನನ್ನು ಎರಡನೇ ಬಾರಿ ಏನೆಂದು ಕೋರಿದನು?